ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 144-148
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೈಸೂರು ನಗರದ ಪೌರಕಾರ್ಮಿಕರ ಸಂಸ್ಕೃತಿ: ಒಂದು ಅಧ್ಯಯನ

**ಡಾ. ಬಿ. ಕೆ. ಕುಮಾರ್**

ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜನಗರ.

***Abstract:***

*ಭಾರತದ ದೇಶದವು ವೈವಿಧ್ಯತೆಯಿಂದ ಕೂಡಿರುವ ರಾಷ್ಟ್ರವಾಗಿದ್ದು, ಇಲ್ಲಿ ಹಲವಾರು ಧರ್ಮ, ಜನಾಂಗ, ಜಾತಿ, ಸಮಾಜ, ಸಂಸ್ಕೃತಿಗಳಿವೆ. ಪ್ರತಿಯೊಂದು ಜನಸಮುದಾಯಗಳು ತಮ್ಮ ಜೀವನ ನಿರ್ವಹಣೆಗೆ ವಿವಿಧ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬಹುತೇಕ ಸಮುದಾಯಗಳು ತಮ್ಮದೇಯಾದ ಪಾರಂಪರಿಕ ವೃತ್ತಿಯನ್ನು ಮಾಡಿಕೊಂಡು ಬರುತ್ತಿದ್ದು, ಅವುಗಳಲ್ಲಿ ಕುಂಬಾರ, ಅಗಸ, ಆಚಾರಿ, ಉಪ್ಪಾರ, ಚಮ್ಮಾರ, ಒಕ್ಕಲಿಗ, ಅಕ್ಕಸಾಲಿಗ ಮುಂತಾದ ಸಮುದಾಯಗಳ ಜೊತೆಗೆ ಪೌರಕಾರ್ಮಿಕ ಸಮುದಾಯವು ಕೂಡ ಒಂದಾಗಿದೆ. ಪ್ರತಿಯೊಂದು ಸಮುದಾಯದಗಳು ತಮ್ಮದೇ ಆಚಾರ-ವಿಚಾರ, ನಂಬಿಕೆ, ರೂಢಿ ಸಂಪ್ರದಾಯ, ಸಂಸ್ಕೃತಿಯನ್ನು ಹೊಂದಿದ್ದು, ಪ್ರಸ್ತುತ ಲೇಖನದಲ್ಲಿ ಪೌರಕಾರ್ಮಿಕರ ಸಂಸ್ಕೃತಿಯನ್ನು ವಿಶ್ಲೇಷಿಸಲಾಗಿದೆ.*

***Keywords:*** *ಅಸ್ಪೃಶ್ಯತೆ, ಮೂಲ ನಿವಾಸಿಗಳು, ಪೌರಕಾರ್ಮಿಕರು, ಪರಿಶಿಷ್ಟ ಜಾತಿ, ವೃತ್ತಿಯಾದಾರಿತ ಸಮುದಾಯ.*

**ಪೀಠಿಕೆ**

ಪೌರಕಾರ್ಮಿಕ ವೃತ್ತಿಯಲ್ಲಿ ತೊಡಗಿರುವ ಸಮುದಾಯವನ್ನು ಸಫಾಯಿ ಕರ್ಮಚಾರಿ, ಸಮಗಾರ, ಜಾಡಮಾಲಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಪೌರ ಅಧಿನಿಯಮ 1993ರಲ್ಲಿ ಉಲ್ಲೇಖಿಸಿರುವಂತೆ ಪೌರಕಾರ್ಮಿಕರೆಂದರೆ ಚರಂಡಿ ಗಳನ್ನು ಅಥವಾ ಕಸಾಯಿ ಖಾನೆಗಳನ್ನು ಸ್ವಚ್ಛಗೊಳಿಸುವಲ್ಲಿ ಅಥವಾ ಮಲವನ್ನು ಹೊರತು ಪಡಿಸಿ ಹೊಲಸನ್ನು ಶುಚಿಗೊಳಿಸುವ ಕಾರ್ಯದಲ್ಲಿ ನಿರತರಾಗುವವರನ್ನು ಪೌರಕಾರ್ಮಿಕ ರೆಂದು ಹೇಳ ಲಾಗಿದೆ.

**ಉದ್ದೇಶಗಳು**

- ಪೌರ ಕಾರ್ಮಿಕರ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸುವುದು.
- ಪೌರ ಕಾರ್ಮಿಕರ ವಿಶಿಷ್ಟ ಸಂಸ್ಕೃತಿಯನ್ನು ತಿಳಿಯುವುದು.

**ಸಂಶೋಧನಾ ವಿಧಾನ ಮತ್ತು ಮಾಹಿತಿ ಸಂಗ್ರಹಣೆ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 50 ಕಾರ್ಮಿಕರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಪ್ರಮುಖವಾಗಿ ಅವಲೋಕನ ಮತ್ತು ಸಂದರ್ಶನ ವಿಧಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ.

**ವಿಷಯ ಮಂಡನೆ**

ಮಾನವನ ಸಂಸ್ಕೃತಿಯು ಸಾಮಾಜೀಕರಣ ಹಾಗೂ ಕಲಿಕೆಯ ಫಲವಾಗಿರುವುದರಿಂದ ಜಗತ್ತಿನ ಪ್ರತಿಯೊಂದು ಸಮಾಜವು ತಮ್ಮದೇಯಾದ ಸಂಸ್ಕೃತಿಯನ್ನು ಹೊಂದಿದೆ. ಈ ದೃಷ್ಟಿಯಲ್ಲಿ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಸಮುದಾಯಗಳಲ್ಲಿ

***Please cite this article as:*** ಕುಮಾರ್. ಬಿ.ಕೆ. (2023). ಮೈಸೂರು ನಗರದ ಪೌರಕಾರ್ಮಿಕರ ಸಂಸ್ಕೃತಿ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(1), 144–148.

ಪೌರಕಾರ್ಮಿಕರ ಸಮುದಾಯವು ಒಂದಾಗಿದ್ದು ಹುಟ್ಟು, ಸಾವು, ಹಬ್ಬ–ಹರಿದಿನಗಳ ಆಚರಣೆಯ ಜೊತೆಗೆ ವಿಶಿಷ್ಟ ರೀತಿಯ ಜೀವನಾವರ್ತನ ಮತ್ತು ವಾರ್ಷಿಕವಾರ್ತನ ಆಚರಣೆಗಳನ್ನು ಹೊಂದಿದೆ.

**ಜನನ ಅಥವ ಹುಟ್ಟಿನ ಆಚರಣೆ:** ಪೌರಕಾರ್ಮಿಕರಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳ ಮೊದಲ ಹೆರಿಗೆಯು ತಾಯಿ ಮನೆಯಲ್ಲೆ ಆಗಬೇಕೆಂದು ಇಚ್ಛಿಸುತ್ತಾರೆ. ಮಗಳಿಗೆ ಏಳು ತಿಂಗಳು ತುಂಬಿದಾಗ ತಾಯಿ ಮನೆಯವರು ಊರಿನ ಯಜಮಾನರು ಸಂಬಂಧಿಕರ ಜೊತೆಯಲ್ಲಿ ಮಗಳನ್ನು ಕರೆತರಲು ಆಕೆಯ ಗಂಡನ ಊರಿಗೆ ಹೋಗುತ್ತಾರೆ. ಆ ದಿನ ತಾಯಿಯ ಮನೆಯವರೆ ತಮ್ಮ ಸ್ವಂತ ಖರ್ಚಿನಲ್ಲಿ ಊಟ ಹಾಕಿ ಊಟ ಆದನಂತರ ಗರ್ಭಿಣಿಗೆ ಹೊಸ ಸೀರೆ, ಅರಿಶಿಣ, ಕುಂಕುಮ, ಹೂವು ಮತ್ತು ಬಳೆಗಳನ್ನು ತೊಡಿಸಿ ಆಕೆಯ ಮುಂದೆ ಒಂಭತ್ತು ತಟ್ಟೆಯನ್ನು ಇಟ್ಟು ಕೊಬ್ಬರಿ, ಬಿಳಿಬೆಲ್ಲ, ಎಲೆ, ಅಡಿಕೆ, ಹೂ, ಹಣ್ಣು, ಸಿಹಿ ತಿಂಡಿಗಳನ್ನು ಇಟ್ಟು ಅಲಂಕರಿ ಸುವುದರ ಜೊತೆಗೆ ಮುತ್ತೈದೆಯರನ್ನು ಕರೆಸಿ ಅರಿಶಿಣ–ಕುಂಕುಮ ಹಚ್ಚಿ, ಹೂವು ಮುಡಿಸಿ ಬಳೆ ತೊಡಿಸಿ ಮಾಡುವ ಶಾಸ್ತ್ರಕ್ಕೆ 'ಉಡಿ ತುಂಬುವ ಶಾಸ್ತ್ರ' ಎಂದು ಕರೆಯುವರು. ಅಂದರೆ ಒಂದು ಬಟ್ಟೆಯಲ್ಲಿ ಕಾಯಿ, ಬೆಲ್ಲ, ಎಲೆ, ಅಡಿಕೆ, ಬಾಳೆಹಣ್ಣು, ಒಂದು ಪಾವು ಅಕ್ಕಿ, ದುಡ್ಡನ್ನು ಹಾಕಿ ಗಂಟು ಕಟ್ಟುವುದನ್ನು 'ಉಡಿ' ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಉಡಿಯನ್ನು ಹೆಣ್ಣು ಮಗಳ ನಡುವಿಗೆ ಕಟ್ಟಿ ಗಂಡನ ಮನೆಯಿಂದ ತಂದೆ–ತಾಯಿ ಮತ್ತು ಗ್ರಾಮಸ್ಥರ ಜೊತೆ ಹಿಂದಿರುತ್ತಾರೆ. ಏಳು ಮತ್ತು ಒಂಭತ್ತು ತಿಂಗಳಿಗೊಮ್ಮೆ ಗರ್ಭಿಣಿಗೆ ಕೈ–ಎಣ್ಣೆ ಕುಡಿಸುವುದು (ಹರಳೆಣ್ಣೆ) ಇವರಲ್ಲಿ ಸಾಮಾನ್ಯ ವಾಗಿದೆ. ಕಾರಣ ಹೊಟ್ಟೆಯ ಒಳಗಿನ ಗಲೀಜು ಹೋಗಿ ಹೆರಿಗೆ ಸುಲಭವಾಗುತ್ತದೆ ಎಂಬುದು ಇವರ ನಂಬಿಕೆ. ಮಗು ಹುಟ್ಟಿದ ಮೇಲೆ ಬಾಣಂತಿಗೆ ಕುಸಲಕ್ಕಿಯಲ್ಲಿ ಮಾಡಿದ ಸಪ್ಪೆ ಅನ್ನ ನೀಡುವುದು ವಾಡಿಕೆ. ಹೆರಿಗೆಯಾದ ಹದಿನೈದು ದಿನಗಳ ತನಕ ಬಾಣಂತಿಗೆ ಮಾಂಸದ ಊಟ ಕೊಡುವುದಿಲ್ಲ. ಹದಿನೈದು ದಿನ ಕಳೆದ ಮೇಲೆ ಆಡಿನ ಮಾಂಸದ ಊಟ ಕೊಡುವುದು. ಇವರ ಸಾಮಾನ್ಯ ಪದ್ಧತಿಯಾಗಿದೆ.

**ಋತುಮತಿ ಆಚರಣೆ:** ಪೌರಕಾರ್ಮಿಕರಲ್ಲಿ ಹೆಣ್ಣು ಮಗಳು ಮೈನೆರೆದಾಗ ಮಾಡುವ ಶಾಸ್ತ್ರಕ್ಕೆ 'ಗುಡ್ಲು'ಶಾಸ್ತ್ರ ಎಂದು ಕರೆಯುವರು. ಮೈನೆರೆದ ಹೆಣ್ಣುಮಗಳ ಮನೆಯ ಸೂತಕದ ಮನೆ, ಈ ಸೂತಕ ಕಳೆಯುವವರೆಗೂ ಪೌರಕಾರ್ಮಿಕರು ಬೇರೆಯವರ ಮನೆಗೆ ಹೋಗುವಂತಿಲ್ಲ. ಬೇರೆಯವರು ಸಹ ಇವರ ಮನೆಗೆ ಬರುವುದಿಲ್ಲ. ಮೈನೆರೆದ ಹೆಣ್ಣು ಮಗಳಿಗೆ ಬೆಳಿಗ್ಗೆ ಸೂರ್ಯ ಹುಟ್ಟುವ ಮೊದಲೇ ಸ್ನಾನ ಮಾಡಿಸಿ ಅರಿಶಿಣ, ಕುಂಕುಮ, ಹೂ–ಬಳೆ ತೊಡಿಸಿ, ಹೊಸ ಸೀರೆ ಉಡಿಸಿ, ಕೈಗೆ ಬೇವಿನ ಸೊಪ್ಪು, ಕಬ್ಬಿಣದ ಚೂರನ್ನು ಹಿಡಿದು ಮನೆಯ ಹೊರಗೆ ಕಳುಸುತ್ತಾರೆ. ಹುಡುಗಿಯನ್ನು ಮನೆಯಿಂದ ಹೊರಗೆ ಕಳುಹಿಸುವವರ ಸೋದರತ್ತೆಯೇ ಆಗಿರಬೇಕೆಂಬ ನಿಯಮವಿದೆ. ಇಲ್ಲವೆ ಅತ್ತೆಯ ಸಮಾನ ರಾಗಿರಬೇಕು. ಸೂತಕ ಕಳೆಯುವವರೆಗೂ ಹುಡುಗಿಯು ಮನೆಯ ಹೊರಗಿನ ಗುಡಿಸಲಲ್ಲಿ ಇರಬೇಕು. ಹೆಣ್ಣು ಮಗಳು ಮೈನೆರೆದಾಗ, ಮೊದಲು ಆಕೆಯ ಸೋದರ ಮಾವನಿಗೆ ಸುದ್ದಿ ಮುಟ್ಟಿಸುವುದು ಪ್ರತೀತಿಯಾಗಿರುತ್ತದೆ. ಆತ ಬರುವಾಗ ಅಂಕೋಲೆ ಕಡ್ಡಿ, ತೆಂಗಿನಗರಿ, ಬೇವಿನಸೊಪ್ಪು, ತಂದು 'ಗುಡ್ಲು' ಕಟ್ಟಿ, ಒಳಗೆ ಸಗಣಿಯಿಚಿದ ನೆಲಸಾರಿಸಿ ದೀಪಹಚ್ಚಿಡುತ್ತಾನೆ. ಆ ಗುಡಿಸಲೊಳಗೆ ಸೋದರ ಮಾವ ಒಳಗೆಹೋಗಿ ಬಂದಮೇಲೆ ಮೈನೆರೆದ ಹುಡುಗಿಯನ್ನು ಒಳಕ್ಕೆ ಕಳುಹಿಸಿ ಊಟ ಹಾಕುತ್ತಾರೆ. ಆಕೆ ತಿಂದುಬಿಟ್ಟ ಊಟವನ್ನು ಯಾರು ತಿನ್ನುವ ಹಾಗಿಲ್ಲ. ಏಕೆಂದರೆ ಆಕೆಯ ಎಂಜಲು ದೋಷ ಪೂರಿತವಾದುದ್ದು ಎಂಬುದು ಇವರ ನಂಬಿಕೆ. ಆ ಎಂಜಲನ್ನು ಗುಡ್ಲು ಒಳಗಡೆ ಒಂದು ಗುಂಡಿಮಾಡಿ ಅದರಲ್ಲಿ ಹಾಕಿ ಮುಚ್ಚಿಡುತ್ತಾರೆ. ಮೈನೆರೆದ ಹೆಣ್ಣು ಮಗಳು ಗುಡ್ಲಲ್ಲಿ ಹನ್ನೆರಡು ದಿನ ಇರಬೇಕೆಂದು

ನಿಯಮವಿರುತ್ತದೆ. ಪ್ರತಿದಿನ ಕೊಬ್ಬರಿ, ಎಳ್ಳೂ, ಬೆಲ್ಲ, ಬೇಯಿಸಿದ ಉದ್ದನ್ನು ಊಟದ ಮೊದಲೇ ಮಡಿಕೆಯ ಚೂರಲ್ಲಿ ಹಾಕಿ ಕೊಡುತ್ತಾರೆ.

**ವೈವಾಹಿಕ ಆಚರಣೆ:** ಪೌರಕಾರ್ಮಿಕರಲ್ಲಿ ಹೆಣ್ಣು ಮಗಳ ಮದುವೆಯು ಏಳು ಅಥವಾ ಐದು ದಿನ ಅಥವಾ ಒಂಬತ್ತು ದಿನಗಳು ಬಾಕಿ ಇರುವಾಗಲೆ ಮದುಮಗಳನ್ನು ಪ್ರತಿದಿನ ಅರಿಶಿಣದ ನೀರು ಹಾಕಿ ಸ್ನಾನ ಮಾಡಿಸುವುದು ಇವರ ಸಂಪ್ರದಾಯ. ಮೊದಲು ತಾಯಿ ಮನೆಯಲ್ಲಿ ಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ ನಂತರ ಉಳಿದ ಸಂಬಂಧಿಕರ ಮನೆಗಳಲ್ಲಿ ಅರಿಶಿಣದ ನೀರು ಹಾಕಿ ಸ್ನಾನ ಮಾಡಿಸಲಾಗುತ್ತದೆ. ಇದರಲ್ಲಿ ಮುತ್ತೈದೆಯರ ಪಾತ್ರ ಹಿರಿದು ಎಂದೇ ಹೇಳಬಹುದಾಗಿದೆ. ಏಕೆಂದರೆ ಮುತ್ತೈದೆಯರು ಸೇರಿ ಅರಿಶಿಣ ಕುಂಕುಮ ಶಾಸ್ತ್ರಮಾಡುವುದರ ಜೊತೆಗೆ ತಾಳಿ ಭಾಗ್ಯ ಗಟ್ಟಿಯಾಗಿರಲೆಂದು ತೆಂಗಿನ ಕಾಯಿಗೆ ಪೂಜೆ ಮಾಡುತ್ತಾರೆ. ಪೌರಕಾರ್ಮಿಕರಲ್ಲಿ ಅರಿಶಿಣದ ನೀರು ಹಾಕಿದ ಮೇಲೆ ಗಂಡಾಗಲಿ ಹೆಣ್ಣಾಗಲಿ ಹೊರಗಡೆ ಹೋಗುವ ಹಾಗಿರುವುದಿಲ್ಲ. ಕಾರಣ ಬೂತ–ಪ್ರೇತಗಳ ತೊಂದರೆ, ಗಾಳಿ ಸೋಂಕು ದೃಷ್ಟಿಯಾಗುತ್ತದೆ ಎಂಬ ನಂಬಿಕೆ ಇವರಿಗೆ. ಹೊರಗೆ ಹೋಗಲೇಬೇಕೆಂಬ ಅನಿವಾರ್ಯತೆ ಬಂದಾಗ ಕೈಗೆ ಕಬ್ಬಿಣದ ಆಯುಧ ಕೊಟ್ಟು ಜೊತೆಯಲ್ಲಿ ಹುಡುಗ ಅಥವಾ ಹುಡುಗಿಯನ್ನು ಕಳುಹಿಸುತ್ತಾರೆ. ಮದುವೆಯ ಹಿಂದಿನ ದಿನ ರಾತ್ರಿ ಗಂಡು–ಹೆಣ್ಣಿಗೆ ಅರಿಶಿಣ ಒತ್ತುವ ಶಾಸ್ತ್ರ ಮಾಡುತ್ತಾರೆ. ಅಂದರೆ ಅರಿಶಿಣದ ನೀರನ್ನು ತಲೆಯ ಮೇಲೆ ಹಾಕಿ ಸ್ನಾನ ಮಾಡಿಸುತ್ತಾರೆ. ಎರಡು ಕರಿಮಣಿಯನ್ನು ದಾರಕ್ಕೆ ಪೋಣಿಸಿ ಹಾಕಿ ಕೊಳ್ಳುವುದೇ 'ತಾಳಿ' ಎಂದು ಇವರ ನಂಬಿಕೆ. ಮದುವೆಯ ದಿನವೇ ಪೂಜೆಗೆ ಕುರಿಯನ್ನು ಬಲಿಕೊಟ್ಟು ತಾಳಿ ಕಟ್ಟುವ ಮುಂಚಿತವಾಗಿ ಮಡಿಕೆಗಳಿಗೆ ನೀರು ತುಂಬಿ ಮಕ್ಕಳಿನಿಂದ ಪೂಜೆ ಮಾಡಿಸುವುದು ಇವರ ಒಂದು ವಿಶಿಷ್ಠ ಲಕ್ಷಣವಾಗಿ ಕಂಡುಬರುತ್ತದೆ.

**ಶವಸಂಸ್ಕಾರ:** ಪೌರಕಾರ್ಮಿಕರ ಸಮುದಾಯದಲ್ಲಿ ಸಾವಿನ ಆಚರಣೆಯು ವಿಶಿಷ್ಠ ರೀತಿಯ ಸಂಪ್ರದಾಯವಾಗಿ ಕಂಡುಬರುತ್ತದೆ. ಹೆಣ್ಣು ಮಕ್ಕಳು ಸತ್ತರೆ ತವರು ಮನೆಯವರು ಆಕೆಗೆ ಬಟ್ಟೆ ಪೂಜೆ ಸಾಮಾಗ್ರಿಗಳನ್ನು ಕೊಡುವುದು ಅವರ ಸಂಪ್ರದಾಯ. ಗಂಡು ಮಕ್ಕಳು ಸತ್ತರೆ ಸೋದರ ಸಂಬಂಧಿಗಳು ಬಟ್ಟೆ ಪೂಜೆ ಸಾಮಾನು ಸಾಮಾಗ್ರಿಗಳನ್ನು ಕೊಡುವ ಪದ್ಧತಿಯು ಇವರಲ್ಲಿ ಕಂಡುಬರುತ್ತದೆ. ಬಟ್ಟೆಯನ್ನು ಹೆಣಕ್ಕೆ ಸ್ನಾನ ಮಾಡಿಸಿ ತೊಡಿಸಿ ಅರಿಶಿಣ–ಕುಂಕುಮ, ಬಳೆ ತೊಡಿಸಿ ಹೆಣದ ಪಕ್ಕಕ್ಕೆ ಕೂರಿಸಿ ಇಬ್ಬರಿಗೂ ಪೂಜೆ ಮಾಡಿಸುತ್ತಾರೆ. ಆದರೆ ಹೆಣ್ಣಾಗಲಿ ಗಂಡಾಗಲಿ ಮದುವೆಗೆ ಮುಂಚೆ ಸತ್ತರೆ ಪಕ್ಕ ಗುದ್ದಲಿ ಇಟ್ಟು ಪೂಜೆ ಮಾಡುವ ಪದ್ಧತಿ ಕಂಡುಬರುತ್ತದೆ. ಕಾರಣ ಮದುವೆಗೆ ಮುಂಚೆ ಸತ್ತರೆ ದೆವ್ವ–ಪ್ರೇತವಾಗಿ ಅಲೆಯುತ್ತಾರೆ. ಗುದ್ದಲಿ ಇಟ್ಟು ಪೂಜೆ ಮಾಡಿದರೆ ಅವರಿಗೆ ಸ್ವರ್ಗ ಸಿಗುತ್ತದೆ ಎಂಬುದು ಇವರ ನಂಬಿಕೆಯಾಗಿದೆ. ಪೌರಕಾರ್ಮಿಕರ ಸಮುದಾಯದಲ್ಲಿ ಮದುವೆಗೆ ಮುಂಚೆ ಸತ್ತರೆ ಸುಡುವ ಪದ್ಧತಿ, ಮದುವೆಯಾದ ಮೇಲೆ ಸತ್ತರೆ ಅವರನ್ನು ಮಣ್ಣು ಮಾಡುವ ಪದ್ಧತಿ ಕಂಡುಬರುತ್ತದೆ.

**ಧಾರ್ಮಿಕ ಆಚರಣೆಗಳು:** ಧಾರ್ಮಿಕ ಆಚರಣೆಗಳು ಪೌರಕಾರ್ಮಿಕರ ಸಮುದಾಯದ ವಿಶಿಷ್ಟ ಲಕ್ಷಣಗಳಲ್ಲಿ ಒಂದಾಗಿದ್ದು, ಈ ವಿಶಿಷ್ಟ ಸಂಸ್ಕೃತಿಯು ಆದಿವಾಸಿಗಳನ್ನು ಹೊರತು ಪಡಿಸಿದರೆ ನಂತರದ ಸ್ಥಾನ ಪೌರಕಾರ್ಮಿಕರ ಸಮುದಾಯದಲ್ಲಿ ಕಾಣಬಹುದಾಗಿದೆ. ಈ ಸಮುದಾಯದವರು ಮಾಯಂ ಪೆರಮಾಳ್, ಮುನೇಶ್ವರ ನಲ್ಲಕ್ಕೂ ಪಟ್ಟಲದಮ್ಮ ಮುತ್ತು ಮಾರಮ್ಮ ಬನ್ನೀರಮ್ಮ ಮುಂತಾದ ದೇವರನ್ನು ಪೂಜಿಸುತ್ತಾರೆ.

**ಮಾಯಾ ಪೆರುಮಾಳ್:** ಇದು ಪಗಡಿ ಕತ್ತಿಲವಾರು ಕುಲದವರ ಮನೆಯ ದೇವರಾಗಿದ್ದು, ಇದು ತಮಿಳುನಾಡಿನ ದೇವಾಲಯವಾಗಿದ್ದು ಕರ್ನಾಟಕ ದಲ್ಲಿರುವ ತಮಿಳುನಾಡಿನ ಮೂಲದ ಪೌರ ಕಾರ್ಮಿಕರು ಎರಡು ವರ್ಷಕ್ಕೊಮ್ಮೆ ಕಾರ್ತಿಕ

ಮಾಸದಲ್ಲಿ ಹೋಗಿ ಪೂಜೆ ಮಾಡಿ ಬರುತ್ತಾರೆ. ದೇವಸ್ಥಾನಕ್ಕೆ ಹೋಗುವ ಕುಟುಂಬದವರಿಗೆ ಕರ್ನಾಟಕದಲ್ಲಿ ವಾಸವಾಗಿರುವ ಪೌರಕಾರ್ಮಿಕರು ಇನ್ನೂರು ರೂಪಾಯಿಗಳನ್ನು ಕೊಟ್ಟು ಕಳುಹಿಸುವುದು ವಾಡಿಕೆಯಾಗಿದೆ. ದೇವರನ್ನು ಪೂಜೆ ಮಾಡುವ ಪೂಜಾರಿಗಳು ಅವಿವಾಹಿತರಾಗಿದ್ದು, ಬಂದ ಭಕ್ತರಿಗೆ ಅವರ ಕಷ್ಟಗಳನ್ನು ಬಗೆಹರಿಸಿ ಕೊಡುವ ದೇವರು ಎಂಬ ನಂಬಿಕೆ ಪೌರಕಾರ್ಮಿಕರಲ್ಲಿ ಇಂದಿಗೂ ಕಂಡುಬರುತ್ತದೆ. ದೆವ್ವ, ಪೀಡೆ, ಹಿಡಿದವರು ಅನಾರೋಗ್ಯವಂತರು, ಅಂತರವರನ್ನು ಕರೆದು ಕೊಂಡು ಹೋಗಿ ಪೂಜಾರಿಯ ಕೈಯಲ್ಲಿ ಪೂಜೆ ಮಾಡಿಸುವುದರ ಜೊತೆಗೆ ದೇವರ ಪೂಜೆಯ ತೀರ್ಥವನ್ನು ಕುಡಿಸಿದರೆ ಕಷ್ಟಗಳೆಲ್ಲ ಪರಿಹಾರವಾಗುತ್ತದೆ ಎಂಬ ನಂಬಿಕೆ ಇವರಲ್ಲಿ ಕಂಡುಬರುತ್ತದೆ.

**ಪಟ್ಟಲದಮ್ಮ:** ಮೈಸೂರಿನಲ್ಲಿ ನೆಲೆಸಿರುವ ಆಂಧ್ರದ ಮತ್ತು ತಮಿಳುನಾಡಿನ ಮೂಲದ ಶೇ.70ಕ್ಕೂ ಹೆಚ್ಚು ಪೌರಕಾರ್ಮಿಕರು ಮನೆಯ ದೇವರಾಗಿ ಪಟ್ಟಲದಮ್ಮ ದೇವರನ್ನು ಪೂಜಿಸುತ್ತಾರೆ. ಈ ಪಟ್ಟಲದಮ್ಮ ದೇವರ ಹಬ್ಬವನ್ನು ವರ್ಷಕ್ಕೊಮ್ಮೆ ಆಚರಿಸುತ್ತಾರೆ. ಈ ಹಬ್ಬವು ಒಂಭತ್ತು ದಿನಗಳ ಹಬ್ಬವಾಗಿದ್ದು ತಮಿಳುನಾಡಿನಿಂದ ಪೂಜಾರಿಯನ್ನು ಕರೆಯಿಸಿ ಪೂಜೆ ಮಾಡುವುದು ಇಲ್ಲಿಯ ಸಂಪ್ರದಾಯ. ಹಬ್ಬದ ಆರನೆಯ ದಿನ ತಮ್ಮ ಕುಟುಂಬದವರು ಸಮೇತ ಊರಿನ ಹೊರಗೆ ದೇವಸ್ಥಾನಕ್ಕೆ ಹೋಗಿ ದೆವ್ವ ಪೀಡೆ ಪಿಶಾಚಿ ಊರಲ್ಲಿದ್ದರೆ ಓಡಿ ಹೋಗಲಿ ಎಂದು ಮುನೇಶ್ವರನಿಗೆ ಪೂಜೆ ಸಲ್ಲಿಸುತ್ತಾರೆ. ಇದನ್ನು ತೆಲಗಿನಲ್ಲಿ ಮುನಿ ಮುಡಕಾಡು ಎಂದು ಕರೆಯುವರು

**ಪೊಂಗಲ್:** ಪೌರಕಾರ್ಮಿಕರಲ್ಲಿ ವಿಶಿಷ್ಟವಾದ ಸಂಸ್ಕೃತಿಯಿಂದ ತುಂಬಿದ ಹಬ್ಬವೆಂದರೆ ಪೊಂಗಲ್ ಹಬ್ಬ. ಇದನ್ನು ಸಾಮಾನ್ಯವಾಗಿ ಸಂಕ್ರಾಂತಿ ತಿಂಗಳಲ್ಲಿ ಆಚರಿಸುವ ಹಬ್ಬವಾಗಿದ್ದು, ಪ್ರತಿ ಮನೆಯಿಂದಲೂ ಐವತ್ತು ರೂಪಾಯಿ ವರಿಯನ್ನು ಎತ್ತಿ (ತೆರಿಗೆ ಎತ್ತುವುದು) ಈ ಹಣವನ್ನು ಊರಿನ ಯಜಮಾನರು ಸಂಗ್ರಹಿಸಿ ಹೊಸ ಮಣ್ಣಿನ ಮಡಿಕೆ ಮಾಡಿಸಿ ಎಲ್ಲಾ ಮನೆಯವರಿಗೂ ಒಂದು ಮಡಿಕೆಯಂತೆ ತಂದು ಕೊಡುತ್ತಾರೆ. ಕೊಟ್ಟ ಮಡಿಕೆಯನ್ನು ಎಲ್ಲರು ದೇವಸ್ಥಾನದ ಮುಂದೆ ಪ್ರತ್ಯೇಕ ಒಲೆ ನಿರ್ಮಿಸಿ ಅಕ್ಕಿ, ಬೆಲ್ಲ, ನೀರು, ಹಾಲು ಹೆಸರುಬೇಳೆ, ಗೊಡಂಬಿ, ದ್ರಾಕ್ಷಿ, ಏಲಕ್ಕಿ ಮುಂತಾದ ಪದಾರ್ಥಗಳನ್ನು ಹಾಕಿ ಅಡುಗೆ ಮಾಡುತ್ತಾರೆ. ಈ ಅಡುಗೆ ಮಾಡುವುದರಲ್ಲಿ ಮತ್ತೊಂದು ವಿಶೇಷತೆ ಎಂದರೆ ಅಡುಗೆ ಯಾವ ಮಡಿಕೆಯಲ್ಲಿ ಮೊದಲು ತಯಾರಾಗುತ್ತದೋ ಆ ಅಡುಗೆ ಮಾಡಿದವರಿಗೆ ಬಹುಮಾನವನ್ನು ಕೊಟ್ಟು ಮಾಡಿದ ಅಡುಗೆಯನ್ನು ದೇವರ ಪೂಜೆಗೆ ಇಡಲಾಗುತ್ತದೆ.

**ಮುನೇಶ್ವರ ಅಥವಾ ವನ ಬೋಜ ಹಬ್ಬ**

ಪೌರಕಾರ್ಮಿಕರ ಸಮುದಾಯದಲ್ಲಿ ಮುನೇಶ್ವರನ ಹಬ್ಬವನ್ನು ವರ್ಷಕ್ಕೆ ಒಂದು ಬಾರಿ ಆಚರಿಸುವ ಹಬ್ಬವಾಗಿದ್ದು ಹಬ್ಬವನ್ನು ಭಾನುವಾರದಂದೆ ಆಚರಿಸುತ್ತಾರೆ. ಏಕೆಂದರೇ ಭಾನುವಾರವು ಮುನೇಶ್ವರನಿಗೆ ಅತ್ಯಂತ ಪ್ರಿಯವಾದ ವಾರ ಎಂಬುದು ಪೌರಕಾರ್ಮಿಕರ ನಂಬಿಕೆ. ಮುನೇಶ್ವರ ದೇವರನ್ನು ಅವಿವಾಹಿತ ಯುವಕ ಮಾತ್ರ ಪೂಜೆ ಮಾಡುವುದು ಇವರ ಸಂಪ್ರದಾಯವಾಗಿದೆ. ಏಕೆಂದರೆ ವಿವಾಹವಾದವರು ಮೈಲಿಗೆಯಾದವರು ಎಂಬ ನಂಬಿಕೆ ಇವರಲ್ಲಿ ಕಂಡು ಬರುತ್ತದೆ. ಅವಿವಾಹಿತ ಯುವಕನು ಮುನೇಶ್ವರನ್ನು ಪೂಜೆ ಮಾಡುವುದರ ಜೊತೆಗೆ ಎಲ್ಲರ ಮನೆಯಿಂದ ಅಕ್ಕಿ ಸಂಗ್ರಹಿಸಿ ಶನಿವಾರ ರಾತ್ರಿ ಅನ್ನ ಮಾಡಿ ಅದನ್ನು ದೇವಸ್ಥಾನದಲ್ಲೆ ನೀಡುತ್ತಾನೆ. ಭಾನುವಾರ ಬೆಳಿಗ್ಗೆ ಊರಿನ ಮಧ್ಯೆ ಇರುವ ಬೇವಿನ ಮರದಲ್ಲಿ ಬೇವಿನ ಸೊಪ್ಪು ತಂದು ಸುತ್ತಲು ಹಾಕಿ ಎಲೆಗಳ ಮೇಲೆ ರಾತ್ರಿ ಮಾಡಿದ ಅನ್ನವನ್ನು ರಾಶಿ ಹಾಕಿ ಅದರ ಸುತ್ತಲು ಅರಿಶಿಣ, ಕುಂಕುಮ, ಹೂವು, ಬಾಳೆಹಣ್ಣು, ಹಿಟ್ಟು, ದೀಪ ಹಚ್ಚುತ್ತಾನೆ. ಆ ಸಮಯದಲ್ಲಿ ಊರಿನ ಜನರೆಲ್ಲ ಅಲ್ಲಿಗೆ ಅರಿಣಿನ, ಕುಂಕುಮ ನೀರು ರಾಗಿ ಅಂಬ್ಲಿ, ಮಜ್ಜಿಗೆ ತೆಗೆದುಕೊಂಡು ಬಂದು ಅನ್ನದ

ರಾಶಿಯ ಮುಂದೆ ಐದು ಜನ ವಿಧವೆಯರು ಮುನೇಶ್ವರನಿಗೆ ಪೂಜೆ ಸಲ್ಲಿಸುತ್ತಾರೆ.

**ನಲ್ಲಕ ದೇವರು:** ಪೌರಕಾರ್ಮಿಕರು ಪೂಜಿಸುವಂತಹ ದೇವರುಗಳಲ್ಲಿ ನಲ್ಲಕ ದೆವರು ಸಹಾ ಒಂದಾಗಿದ್ದು ಈ ದೇವರ ಹಬ್ಬವನ್ನು ವರ್ಷಕ್ಕೆ ಒಂದು ಸಾರಿ ಆಚರಿಸುವುದು ಇವರಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಈ ಹಬ್ಬವನ್ನು ಹಗಲು ಹೊತ್ತಿನಲ್ಲಿ ಆಚರಿಸಿಕೊಂಡು ಬರಲಾಗುತ್ತಿದ್ದು, ಈ ಹಬ್ಬದ ವಿಶೇಷತೆ ಎಂದರೆ ಊರಿನ ಮಧ್ಯೆ ಒಂದೂವರೆ ಅಡಿ ಆಳದ ಗುಂಡಿ ತೋಡಿ, ಆ ಗುಂಡಿಗೆ ನೀರು ತುಂಬಿ, ಅದರ ಸುತ್ತ ಅರಿಶಿಣ, ಕುಂಕುಮ, ಹೂವನಿಟ್ಟು ಪೂಜೆ ಮಾಡಿ ಒಂದು ಹಂದಿಯನ್ನು ತಂದು ನೀರಿನಲ್ಲಿ ತಲೆಯನ್ನು ಮುಳುಗಿಸುತ್ತಾರೆ. ಅದರ ಪ್ರಾಣ ಹೋದ ಮೆಲೆ ಚಾಕುವಿನಿಂದ ಕುಯ್ದು ಬಲಿಕೊಡುತ್ತಾರೆ. ಆದರೆ ಅದರ ರಕ್ತ ಭೂಮಿಗೆ ಬೀಳುವಂತಿಲ್ಲ. ಬಿದ್ದರೆ ಊರಿಗೆ ಕೆಡಕಾಗುತ್ತದೆ ಎನ್ನುವುದು ಇವರ ವಿಶಿಷ್ಟ ನಂಬಿಕೆಯಾಗಿದೆ. ಮಕ್ಕಳಿಗೆ ಜ್ವರ, ಕಾಯಿಲೆ, ಸೀತಾಳೆ, ದಡಾರ, ಬಾರದಿರಲಿ ಎಂದು ನಲ್ಲಕ ದೇವರಿಗೆ ಹರಕೆ ಕಟ್ಟುವ ಮೂಲಕ ಹಬ್ಬವನ್ನು ಆಚರಿಸುವುದು ವಾಡಿಕೆಯಾಗಿದೆ. ಚಾಕುವಿನಿಂದ ಕೊಂದಂತಹ ಹಂದಿಮಾಂಸವನ್ನು ಹೊಸ ಮಡಿಕೆಯಲ್ಲಿ ಬೇಯಿಸಿ ಊರಿನ ಹೊರಗೆ ಸೂರ್ಯ ಮುಳುಗುವ ದಿಕ್ಕಿನಲ್ಲಿ ಏಳು ಉಗಿನಿಯಲೆ ಮೇಲೆ ಹಂದಿ ಮಾಂಸವನ್ನಿಟ್ಟು ಏಳು ಜನ ವಿಧವೆಯರನ್ನು ಕರೆಸಿ ಪೂಜೆ ಮಾಡಿಸುತ್ತಾರೆ. ಮಾತ್ರವಲ್ಲದೆ ಪೂಜೆ ಮಾಡಿದ ಏಳು ಜನ ವಿಧವೆಯರು ಏಳು ಎಲೆಯಲ್ಲಿದ್ದ ಎಡೆಯನ್ನು ತಿನ್ನಬೇಕು. ಇವರು ತಿಂದು ಬಿಟ್ಟಂತಹ ಮಾಂಸವನ್ನು ಪ್ರಸಾದವೆಂದು ಊರಿನ ಜನರಿಗೆಲ್ಲ ಹಂಚುವುದು ಇಲ್ಲಿಯ ವಾಡಿಕೆಯಾಗಿದೆ.

**ಉಪಸಂಹಾರ**

ಸಂಶೋಧನಾ ಅಧ್ಯಯನದಿಂದ ತಿಳಿದು ಬಂದ ಫಲಿತಾಂಶ ಎಂದರೆ, ಪ್ರತಿಯೊಂದು ಭಾರತೀಯ ಸಮುದಾಯವು ತನ್ನದೇ ಆದಂತಹ ವಿಶಿಷ್ಟ ರೀತಿಯ ಸಾಂಸ್ಕೃತಿಕ ಲಕ್ಷಣಗಳನ್ನು ಹೊಂದಿರುವುದರಿಂದ ಸಂಸ್ಕೃತಿಯು ಸಮುದಾಯದಿಂದ ಸಮುದಾಯಕ್ಕೆ ಬೇರೆ–ಬೇರೆ ಇರುತ್ತವೆ ಎನ್ನುವುದು ಸ್ಪಷ್ಟ. ಈ ನಿಟ್ಟಿನಲ್ಲಿ ಪೌರಕಾರ್ಮಿಕರ ಸಮುದಾಯವು ತನ್ನದೇ ಆದಂತಹ ವೈವಾಹಿಕ ಆಚರಣೆ, ಧಾರ್ಮಿಕ ಆಚರಣೆ, ಸಾಂಸ್ಕೃತಿಕ ಆಚರಣೆಗಳನ್ನು ಹೊಂದಿದ್ದು, ಇತರೆ ಸಮುದಾಯಕ್ಕಿಂತ ಭಿನ್ನವಾಗಿರುವುದರಿಂದ ಆಧುನಿಕ ಪ್ರಪಂಚದಲ್ಲೂ ಸಹ ತನ್ನ ಸಂಸ್ಸೃತಿಯನ್ನು ಉಳಸಿಕೊಂಡು ಬಂದು ಮುಂದಿನ ಪೀಳಿಗೆಗೆ ವರ್ಗಾಯಿಸುತ್ತಿರುವುದು ಅಧ್ಯಯನದಿಂದ ಸ್ಪಸ್ಟವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಅಂಬೇಡ್ಕರ್ ಬಿ.ಆರ್. (1969). *ಅನ್‌ಟಚಬಲ್ಸ್.* ಭಾರತೀಯ ಬುದ್ಧ ಶಿಕ್ಷಾ,
- ಜವರಯ್ಯ ಮ.ನ. (1995). *ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ.* ಮೀರಾಪ್ರಿಂಟರ್ಸ್,
- *ಕರ್ನಾಟಕ ಪೌರ ನಿಯಮಗಳ ಅಧಿನಿಯಮ–1976.* (2008). *ಬೆಂಗಳೂರು ಪ್ರೆಸ್.*
- ಕಾವಲಿ. (1990). ಕಸ್ತೂರಿ ವಿಶ್ವಕೋಶ. ಮಾರುತಿ ಮುದ್ರಣಾಲಯ.
- ಮಾರುತಿ ಹೆಚ್. (2011). *ಪೌರಕಾರ್ಮಿಕರ ಜೀವನಶೈಲಿ.* ಸರಸ್ವತಿ ಪ್ರಿಂಟರ್ಸ್
- ನಾಯಕ್ ಹೆಚ್.ಎಂ. (2000). *ಕನ್ನಡ ವಿಶ್ವಕೋಶ–ಸಂ.8.* ಸರ್ಕಾರಿ ಮುದ್ರಣಾಲಯ.
- ಪರಮೇಶ್ವರ. (2008). *ಪೌರಕಾಮಿಕ ಚೇತನ ಐಪಿಡಿ ಸಾಲಪ್ಪ.* ಸ್ನೇಹಪ್ರಿಂಟರ್ಸ್.
- ಸಿದ್ದಲಿಂಗಯ್ಯ, (2004). *ಪೌರಕಾಮಿಕರ ದುರಂತ.* ಅಂಕಿತ ಪ್ರಕಾಶನ.
- ಸಿದ್ದಲಿಂಗಯ್ಯ. *ಭಂಗಿ ಜನರಬದುಕು.* ವಿಕಾಸ ಮುದ್ರಣಾಲಯ.